ಓಃಎಸ್ಃನಂ.*56/2018*

ಪಿ.ಡಬ್ಲ್ಯೂ- *1*

**ದಿಃ *09-12-2021* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎನ್ ಕೆ ವಕೀಲರಿಂದ**

ದಾವ ಸ್ವತ್ತು ನಮ್ಮ ಕುಟುಂಬಕ್ಕೆ ಎನ್ ಆರ್ ಪುರದಲ್ಲಿ ಇದ್ದ ಸ್ವತ್ತುಗಳು ಮುಳುಗಡೆ ಆಗಿದ್ದಕ್ಕೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ನನ್ನ ತಂದೆಗೆ ನಾನು, *1*ನೇ ಪ್ರತಿವಾದಿಯ ಗಂಡ ಹಾಗೂ *4*ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. ನಾನು ಮತ್ತು *1*ನೇ ಪ್ರತಿವಾದಿಯ ಗಂಡ ಶ್ರೀಧರ ಒಂದೇ ತಾಯಿಯ ಮಕ್ಕಳು ಅಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರು ಗೌರಮ್ಮ, ಅವರ ತಾಯಿಯ ಹೆಸರು ಸಾವಿತ್ರಮ್ಮ ಎಂದರೆ ಸರಿ. ಸಾವಿತ್ರಮ್ಮ ನ ನಂತರ ನನ್ನತಂದೆ ನನ್ನ ತಾಯಿ ಗೌರಮ್ಮನನ್ನು ಮದುವೆಯಾದರು ಎಂದರೆ ನನಗೆ ಅವರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ದಾವ ಸ್ವತ್ತಿನ ವಾಸ್ತವಿಕ ಅಳತೆ *55* ಇಂಟು *120*ಕ್ಕಿಂತಲೂ ಹೆಚ್ಚು ಇದೆ ಎಂದರೆ ಸಾಕ್ಷಿಯು *50* ಇಂಟು *120* ಎಂದು ನುಡಿಯುತ್ತಾರೆ. ಅದನ್ನು ಅಳತೆ ಮಾಡಿಸಲು ತಕರಾರು ಇಲ್ಲ ಎಂದರೆ ಸರಿ. ದಾವ ಸ್ವತ್ತಿನ ಸುತ್ತಲೂ ಬೇಲಿ ಇದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ದಿನಾಂಕಃ *30-101987* ರಂದು ತೀರಿಕೊಂಡಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ನನಗೂ ಮತ್ತು ಶ್ರೀಧರ್ ರವರಿಗೂ ಮದುವೆಯಾಗಿತ್ತು ಎಂದರೆ ಸರಿ. ನನ್ನ ತಂದೆ ಇರುವಾಗ ದಿನಾಂಕಃ *12-12-1980* ರಂದು ಜಮೀನುಗಳಿಗೆ ಸಂಬಂಧಿಸಿ ಪಾಲು ವಿಭಾಗ ಆಗಿತ್ತು ಎಂದರೆ ಸರಿ.

ಆ ಸಮಯದಲ್ಲಿ ದಾವ ಸ್ವತ್ತಿನಲ್ಲಿ ನನ್ನ ಮತ್ತು ಶ್ರೀಧರ್ ಮಧ್ಯೆ ಬಾಯಿ ಮಾತಿನ ವಿಭಾಗ ಆಗಿದೆ ಎಂದರೆ ಸರಿಯಲ್ಲ. ವಿಭಾಗ ಆದಾಗಿನಿಂದ ನಾನು ಮತ್ತು ಶ್ರೀಧರ್ ರವರು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿ. ಜಮೀನುಗಳಲ್ಲಿ ವಿಭಾಗ ಆಗಿರುವ ಬಗ್ಗೆ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನಾನು ಮತ್ತು ಪ್ರತಿವಾದಿಗಳು ನಮ್ಮ ಮನೆಗಳ ವಿದ್ಯುಚ್ಚಕ್ತಿ ಬಿಲ್ಲನ್ನು ಪ್ರತ್ಯೇಕವಾಗಿ ಕಟ್ಟುತ್ತಿದ್ದೇವೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯರ ಮನೆಗಳ ಮಧ್ಯೆ ಗೋಡೆ ಇದೆ ಎಂದರೆ ಸರಿ. ನಮ್ಮ ಮತ್ತು *1* ರಿಂದ *3*ನೇ ಪ್ರತಿವಾದಿಯರ ಮಧ್ಯೆ ವಿಶ್ವಾಸ ಇಲ್ಲ ಎಂದರೆ ಸರಿ. ನಾನೇ ವಿವಾದವನ್ನು ಮುಂದುವರಿಸುತ್ತಾ ಬಂದಿರುತ್ತೇನೆಂದರೆ ಸರಿಯಲ್ಲ. *4*ನೇ ಪ್ರತಿವಾದಿಯನ್ನು ಒಳ್ಳೆಯ ಅಂತಸ್ತಿನ ಮನೆಗೆ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. *1993-94* ರಲ್ಲಿ ಆಗಿದೆ ಎಂದು ಹೇಳುವ ವಿಭಾಗದ ಬಗ್ಗೆ ದಾಖಲೆಗಳು ಇರುವುದಿಲ್ಲ. ನಂತರ ಅದರ ಪ್ರಕಾರ

ಖಾತೆಯಾಗಿರುವುದಿಲ್ಲ. ಪ್ರತಿವಾದಿಯರಿಗೆ ಕಿರುಕುಳ ನೀಡಲು ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***